ದಿನಾಂಕ :19/01/2023

ಇಂದ


ರವೀಂದ್ರ.ಎಂ
ಸಾಮಾಜಿಕ ಹೋರಾಟಗಾರ
# 278, ಸರ್ಕಾರಿ ಉತ್ತನಹಳ್ಳಿ
ಹಡಜನ ಅಂಚೆ ,ವರುಣ ಹೋಬಳಿ
ಮೈಸೂರು ತಾಲೂಕು . PIN : 571-311
***ಮೊಬೈಲ್ : +91 9449886677***
***ಇ-ಮೇಲ್ : sec.spj.k@gmail.com***


By: R.P.A.D

ಜಿಲ್ಲಾಧಿಕಾರಿಗಳ ಕಛೇರಿ ಮೈಸೂರು 19 JAN 2023 O/o. The Deputy Commissioner, Mysore

ಇವರಿಗೆ

(1) ಶ್ರೀಯುತ ವಂದಿತಾ ಶರ್ಮ ರವರು
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು
ಕೊಠಡಿ ಸಂಖ್ಯೆ 320, 3ನೇ ಮಾಡಿ .
ವಿಧಾನಸೌಧ, ಬೆಂಗಳೂರು -01

(2) ಮಾನ್ಯ ಲೋಕಾಯುಕ್ತರು
ಕರ್ನಾಟಕ ಲೋಕಾಯುಕ್ತ
ಬಹುಮಹಡಿಗಳ ಕಟ್ಟಡ, ಬೆಂಗಳೂರು-01

(3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
# 105, ಒಂದನೇ ಮಾಡಿ , ವಿಕಾಸಸೌಧ
ಬೆಂಗಳೂರು-01

(4) ಮಾನ್ಯ ಜಿಲ್ಲಾಧಿಕಾರಿಗಳು
ಜಿಲ್ಲಾಧಿಕಾರಿಗಳ ಕಚೇರಿ
ಮೈಸೂರು .

(5) ಮಾನ್ಯ ಪೊಲೀಸ್ ಆಯುಕ್ತರು
ಪೊಲೀಸ್ ಆಯುಕ್ತರ ಕಚೇರಿ
ಮೈಸೂರು.

ಪೊಲೀಸ್ ಕಮೀಷನರ್ ರವರ ಕಛೇರಿ ಮೈಸೂರು ನಗರ, ನಂ........ 19 JAN 2023 OFFICE OF THE POLICE COMMISSIONER MYSORE CITY

ಮಾನ್ಯರೆ ,

**ವಿಷಯ:** ಮೈಸೂರಿನ , ಜಿಲ್ಲಾ ಮತ್ತು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ , ಹಾಗೂ ಇದರ ಅಧೀನ ಕಚೇರಿಗಳಲ್ಲಿ 2010 ರಿಂದ 2022 ರವರೆಗೆ "ಮೆಡಿಕಲ್ ಬಿಲ್" ಮರು ಪಾವತಿಗಾಗಿ , ಹೆಚ್ಚುವರಿ /ನಕಲಿ ಬಿಲ್ಗಳನ್ನು ಸೃಷ್ಟಿಸಿ , ಮಾನ್ಯವಲ್ಲದ ಬಿಲ್ಲುಗಳನ್ನು ಸಹ ಮರುಪಾವತಿಗೊಳಿಸಿ, ಇದರೊಂದಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಸಹಿಯನ್ನು ನಕಲು ಮಾಡಿ ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಹಾಗೂ ಸದರಿ ಅಕ್ರಮಕ್ಕೆ/ಭ್ರಷ್ಟಾಚಾರಕ್ಕೆ ಪರೋಕ್ಷ ಬೆಂಬಲ ನೀಡುತ್ತಿರುವ ಮೈಸೂರಿನ

P.T.O

ಜಿಲ್ಲಾ ಆರೋಗ್ಯ ಮತ್ತು ಘುಟುಂಬ ಕಲ್ಯಾಣ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮದೊಂದಿಗೆ **2010** ರಿಂದ **2022** ರವರೆಗೆ ಮರುಪಾವತಿಯಾಗಿರುವ "ಮೆಡಿಕಲ್ ಬಿಲ್" ಅನ್ನು ತನಿಖೆಗೆ ಒಳಪಡಿಸಿ ಸರ್ಕಾರಕ್ಕೆ ನಷ್ಟವಾಗಿರುವ ಹಣವನ್ನು ಸದರಿ ಅಧಿಕಾರಿಗಳಿಂದ ಮುಟ್ಟುಗೋಲು ಹಾಕಿಕೊಳ್ಳುವುದರ ಸಹಿತ ಆರೋಪಿತರ ವಿರುದ್ಧ ಕ್ರಿಮಿನಲ್ ಮಕದ್ದಮೆ ದಾಖಲಿಸಲು ಬರದ ದೂರರ್ಜಿ.

x x x x x

ವಿಷಯಕ್ಕೆ ಸಂಬಂಧಿಸಿದಂತೆ , ಸರ್ಕಾರಿ ಹಣದ ದುರ್ಬಳಕೆಗಾಗಿ , ನಕಲಿ ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿಸಿ , ಹೆಚ್ಚುವರಿಯಾಗಿ / ಮಾನ್ಯವಲ್ಲದ ಬಿಲ್ಲುಗಳನ್ನು ನಗಧಿಕರಿಸಿ , ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಸಹಿಯನ್ನು ನಕಲು ಮಾಡಿ ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮದೊಂದಿಗೆ , ನಷ್ಟವಾಗಿರುವ ಸರ್ಕಾರಿ ಹಣವನ್ನು ಮರುಪಾವತಿ ಮಾಡಲು ಕ್ರಮ ವಹಿಸುವುದರೊಂದಿಗೆ ಸದರಿ ಅಕ್ರಮದಲ್ಲಿ ಭಾಗಿಯಾಗಿರುವ ಇಲಾಖೆಯ ಎಲ್ಲಾ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮುಖದ್ದಮೆ ದಾಖಲಿಸಲು ಕೋರಿ ಮೇಲ್ಕಂಡ ವಿಳಾಸದ, ಎಂ.ರವೀಂದ್ರ ಎಂಬ ನಾನು ನೀಡುತ್ತಿರುವ ಈ ದೂರಿನ ಕ್ರಮವೇನೆಂದರೆ,....

ಈ ದೂರಿನ ದೂರುದಾರನಾದ ನನಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಮೈಸೂರು ಮತ್ತು ಇಲ್ಲಿನ ಅಧೀನ ಕಚೇರಿಗಳಲ್ಲಿ (A,B,C,D ವೃಂದದ ನೌಕರರು) ಸರ್ಕಾರಿ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು , ಕರ್ತವ್ಯ ಲೋಪವೆಸಗಿ ನಕಲಿ ಬಿಲ್ಲುಗಳನ್ನು ಸೃಷ್ಟಿಸಿ , ಹೆಚ್ಚುವರಿಯಾಗಿ ಬಿಲ್ಲುಗಳನ್ನು ಸೃಷ್ಟಿಸಿಕೊಂಡು, DHO ರವರ ಸಹಿಯನ್ನು ನಕಲು ಮಾಡಿ, ಸರ್ಕಾರಿ ಹಣವನ್ನು ದುರ್ಬಳಕೆ ಮಾಡಿಕೊಂಡು ಅಕ್ರಮವೇಸಗುತ್ತಿರುವುದು ನನ್ನ ಗಮನಕ್ಕೆ ಬರಲಾಗಿ ಇದನ್ನು ಅಧಿಕೃತವಾಗಿ ದಾಖಲೆ ಕಲೆ ಹಾಕಲು ದಿನಾಂಕ:19/08/2022 ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಗೆ

**" 2010 ರಿಂದ 2022 ರವರೆಗೆ ತಮ್ಮ /ಅಧೀನ ಕಚೇರಿ ಅಧಿಕಾರಿಗಳ ಮೆಡಿಕಲ್ ಬಿಲ್ ವಿವರದ ದೃಢೀಕೃತ ಪ್ರತಿ (ಹೆಸರು ,ಹುದ್ದೆ, ವರ್ಷ, ಬಿಲ್ಲಿನ ಮೊತ್ತ, ಇತ್ಯಾದಿ ವಿವರಗಳ ಮಾಹಿತಿ"**

ಒದಗಿಸುವಂತೆ ಮಾಹಿತಿ ಹಕ್ಕಿನಡಿ ಅರ್ಜಿ, ಅದರ ಕೂಡ **IPO 58F 434483** ಅನ್ನು ಲಗತ್ತಿಸಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು, DHO ಕಚೇರಿ, ಮೈಸೂರು ಇವರಿಗೆ ಅರ್ಜಿ ಸಲ್ಲಿಸಿಕೊಂಡಿರುತ್ತೇನೆ . ಈ ರೀತಿ ಸಲ್ಲಿಕೆ ಮಾಡಿದ ಅರ್ಜಿಯನ್ನು ದೂರಿನ ಲಗತ್ತು (1)ರಲ್ಲಿ ಲಗತ್ತಿಸಿ ವಿಚಾರಣೆಗಾಗಿ ಸಲ್ಲಿಸುತ್ತಿದ್ದೇನೆ. ಸದರಿ ಅರ್ಜಿಗೆ ಕ್ರಮವಹಿಸಿದ ಮಾಹಿತಿ ಅಧಿಕಾರಿ ಹಾಗೂ ಸಹಾಯಕ ಆಡಳಿತ ಅಧಿಕಾರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ,ಮೈಸೂರು ಜಿಲ್ಲೆ ಇವರು ತಮ್ಮ ಪತ್ರ ಸಂಖ್ಯೆ:ಮಾ.ಹ/40/2022-23 ದಿನಾಂಕ:25/07/2022 ರಲ್ಲಿ ಹಿಂಬರಹ ನೀಡಿದ್ದು , ಸದರಿ ಹಿಂಬರಹದಲ್ಲಿ

"....ಕಚೇರಿಯಲ್ಲಿ ಎ.ಬಿ.ಸಿ.ಡಿ ವೃಂದದ ನೌಕರರು ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು , ನೀವು ಯಾವ ಬೃಂದದ ನೌಕರರ ಅಥವಾ ಯಾವ ಹುದ್ದೆ ನೌಕರರ ಮಾಹಿತಿ ಬೇಕೆಂದು ಸ್ಪಷ್ಟವಾಗಿ ತಿಳಿಸದೆ ಇರುವ ಕಾರಣ ಈ ಮೇಲಿನಂತೆ ಹಿಂಬರಹ ನೀಡಿ ನಿಮ್ಮ ಉಲ್ಲೇಖಿತ ಅರ್ಜಿ ಮುಕ್ತಾಯಗೊಳಿಸಿದೆ "

P.T.O

ಎಂದು ಲಿಖಿತವಾಗಿ ತಿಳಿಸಿರುತ್ತಾರೆ. ಈ ಪತ್ರವನ್ನು ದೂರಿನ ಲಗತ್ತು (2)ರಲ್ಲಿ ಲಗತ್ತಿಸಿ, ವಿಚಾರಣೆಗಾಗಿ ಸಲ್ಲಿಸುತ್ತಿದ್ದೇನೆ . ಈ ರೀತಿಯಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಸಹಾಯಕ ಆಡಳಿತ ಅಧಿಕಾರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ,ಮೈಸೂರು ಜಿಲ್ಲೆ ಇವರು ನೀಡಿದ ಹಿಂಬರಹವನ್ನು ಪ್ರಶ್ನಿಸಿ ಮಾಹಿತಿ ಹಕ್ಕು ಕಾಯ್ದೆ-2005 ರ ಕಲಂ 19(1)ರಡಿಯಲ್ಲಿ ಪ್ರಥಮ ಮೇಲ್ಮನವಿಯನ್ನು ದಿನಾಂಕ 12/09/2022 ರಂದು ಸಲ್ಲಿಸಿದ್ದು ಈ ರೀತಿ ಸಲ್ಲಿಸಿದ ಮೇಲ್ಮನವಿಯನ್ನು ಈ ದೂರಿನ ಲಗತ್ತು (3)ರಲ್ಲಿ ಲಗತ್ತಿಸಿ ವಿಚಾರಣೆಯ ಮಾಹಿತಿಗಾಗಿ ಸಲ್ಲಿಸುತ್ತಿದ್ದೇನೆ .

ಮುಂದುವರೆದು

> **" ಶ್ರೀ ವಿಜಯಕುಮಾರ್.ಕೆ, ಪ್ರಥಮ ದರ್ಜೆ ಸಹಾಯಕರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಮೈಸೂರು, ಇವರು ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ , ಡಾಕ್ಟರ್ ವೆಂಕಟೇಶ್ ಇವರ ಸಹಿಯನ್ನು ನಕಲು ಮಾಡಿರುವ ಸಂಬಂಧ ವಿಚಾರಣೆ ನಡೆದಿದ್ದು, ಈ ಕಡತದ ಸಂಪೂರ್ಣ ದಾಖಲೆಯ ದೃಢೀಕೃತ ಪ್ರತಿ "**

ಒದಗಿಸುವಂತೆ ದಿನಾಂಕ 12/09/2022 ರಂದು ಸಾರ್ವಜನಿಕ ಮಾಹಿತಿ ಅಧಿಕಾರಿಗಳು DHO ರವರ ಕಚೇರಿ ಮೈಸೂರು ಇವರಿಗೆ ಅರ್ಜಿ ಸಲ್ಲಿಸಿ, ಅರ್ಜಿಯ ಕೂಡ **IPO 58F 054045** ಲಗತ್ತಿಸಿರುತ್ತೇನೆ . ಈ ರೀತಿ ಸಲ್ಲಿಕೆ ಮಾಡಿದ ಅರ್ಜಿಯನ್ನು ಈ ದೂರಿನ ಲಗತ್ತು (4)ರಲ್ಲಿ ಲಗತ್ತಿಸಿರುತ್ತೇನೆ. ಸದರಿ ಅರ್ಜಿಗೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಯಾವುದೇ ಕ್ರಮವಹಿಸದ ಹಿನ್ನೆಲೆಯಲ್ಲಿ ನಿಯಮಾನಸಾರ ಮಾಹಿತಿ ಹಕ್ಕು ಕಾಯ್ದೆ 2005 ರ ಕಲಂ 19(1)ಅಡಿಯಲ್ಲಿ ಪ್ರಥಮ ಮೇಲ್ಮನವಿಯನ್ನು,ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸಲ್ಲಿಸಿಕೊಂಡಿದ್ದು, ಈ ರೀತಿ ಸಲ್ಲಿಕೆ ಮಾಡಿದ ಪ್ರಥಮ ಮೇಲ್ಮನವಿ ಅರ್ಜಿಯನ್ನು ಈ ದೂರಿನ ಲಗತ್ತು (5)ರಲ್ಲಿ ಲಗತ್ತಿಸಿರುತ್ತೇನೆ. ಸದರಿ ಮೇಲ್ಮನವಿಗೆ ಮಾನ್ಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಯಾವುದೇ ಮೇಲ್ಮನವಿ ವಿಚಾರಣೆಯನ್ನು ನಡೆಸಿ,ಮಾಹಿತಿ ನೀಡಿಕೆಗೆ ಈವರೆಗೂ ಕ್ರಮವಹಿಸಿರುವುದಿಲ್ಲ, ಬದಲಿಗೆ ಈ ರೀತಿ ಮೇಲ್ಮನವಿ ಸಲ್ಲಿಕೆಯಾದ ಸುಮಾರು 45 ದಿನಗಳ ನಂತರ ಮಾಹಿತಿ ಅಧಿಕಾರಿ ಹಾಗೂ ಸಹಾಯಕ ಆಡಳಿತ ಅಧಿಕಾರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಮೈಸೂರು ಜಿಲ್ಲೆ ಇವರು , ತಮ್ಮ ಪತ್ರ ಸಂಖ್ಯೆ :ಮಾ.ಹ/71/2022-23 ದಿನಾಂಕ:21/12/2022 ರಲ್ಲಿ ಹಿಂಬರಹ ನೀಡಿದ್ದು ಸದರಿ ಹಿಂಬರಹದಲ್ಲಿ

> **"…. ಶ್ರೀ ವಿಜಯಕುಮಾರ್ ಕೆ , ಪ್ರಥಮ ದರ್ಜೆ ಸಹಾಯಕರು , ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ , ಮೈಸೂರು ಇವರು ಡಾ|| ವೆಂಕಟೇಶ್ , ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯಾಗಿದ್ದ ಸಂದರ್ಭದಲ್ಲಿ ಸಹಿ ನಕಲು ಆಗಿರುತ್ತದೆ ಎಂದು ಈ ಬಗ್ಗೆ ದಾಖಲಾತಿ ದೃಢೀಕೃತ ಪ್ರತಿಯನ್ನು ಕೋರಿರುತ್ತೀರಿ , ಈ ಬಗ್ಗೆ ವಿಭಾಗಿಯ ಸಹ ನಿರ್ದೇಶಕರ ಕಚೇರಿಯಲ್ಲಿ ತನಿಖೆ ಪ್ರಗತಿಯಲ್ಲಿದ್ದು ಮಾಹಿತಿ ನೀಡಲು ಸಾಧ್ಯವಿಲ್ಲವೆಂಬ ಬಗ್ಗೆ ಈ ಹಿಂಬರಹದಲ್ಲಿ ತಮಗೆ ತಿಳಿಸಲಾಗುತ್ತಿದೆ "**

ಎಂಬುದಾಗಿ ತಿಳಿಸಿರುತ್ತಾರೆ. ಅಲ್ಲದೆ, ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಈ ಮೇಲೆ ಹೇಳಿದಂತೆ, ಎರಡೂ ಮಾಹಿತಿ ಹಕ್ಕಿನ ಅರ್ಜಿಗಳಿಗೆ ಹಾಗೂ ಅದರ ಮೇಲ್ಮನವಿ ಅರ್ಜಿಗಳಿಗೆ ನಿಯಮಾನುಸಾರ ಕ್ರಮವಹಿಸದೆ, ಮಾಹಿತಿ ನೀಡದೆ, ಮಾಹಿತಿ ಹಕ್ಕು ಕಾಯ್ದೆ-2005 ರ ಕಲಂ 7(2)ರಂತೆ ಮಾಹಿತಿ ನೀಡಿಕೆಯನ್ನು ನಿರಾಕರಿಸಿರುವುದಲ್ಲದೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು



P.T.O

ಮೈಸೂರು ಜಿಲ್ಲೆ, ಇವರ ಪತ್ರ ಸಂಖ್ಯೆ:ಮಾ.ಹ/68/2022-23 ದಿನಾಂಕ:21/12/2022ರಲ್ಲಿ ಹಿಂಬರಹ ನೀಡಿದ್ದು ಈ ಹಿಂಬರಹವನ್ನುಈ ದೂರಿನ ಲಗತ್ತು- 6, ಸದರಿ ಹಿಂಬರಹದಲ್ಲಿ

**"... 2010 ರಿಂದ 2022 ರ ವರೆಗಿನ ಅಧಿಕಾರಿ/ನೌಕರರ ವೈದ್ಯಕೀಯ ಮರುಪಾವತಿಯ ಬಿಲ್ಲು ಬಾಪ್ತುಗಳ ದಾಖಲಾತಿಗಳು ಮೂರನೇ ವ್ಯಕ್ತಿಯ ದಾಖಲಾತಿಗಳಾಗಿರುವುದರಿಂದ ಹಾಗೂ ವೈಯಕ್ತಿಕ ಮಾಹಿತಿ ಆಗಿರುವುದರಿಂದ ಅವುಗಳನ್ನು ನಿಯಮಾನಸಾರ ನೀಡಲಾಗುವುದಿಲ್ಲವೆಂದು ಸ್ಪಷ್ಟವಾಗಿ ತಮಗೆ ತಿಳಿಸುತ್ತಾ ನಿಮ್ಮ ಮೇಲ್ಮನವಿ ಅರ್ಜಿಯನ್ನು ಹಿಂತಿರುಗಿಸಿದೆ "**

ಎಂಬುದಾಗಿ ತಿಳಿಸಿ ಮಾಹಿತಿ ನೀಡಿಕೆಯನ್ನು ನಿರಾಕರಿಸಿದ್ದು, ಇದು ಸದರಿ ಅಧಿಕಾರಿಗಳ ಅಧಿಕಾರ ದುರ್ಬಳಕೆ, ಮತ್ತು ಕರ್ತವಲೋಪದ ಸಹಿತ ತಮ್ಮ ಹಾಗೂ ತಮ್ಮ ಅಧೀನ ಕಚೇರಿಯ ಅಧಿಕಾರಿಗಳ ಭ್ರಷ್ಟಾಚಾರಕ್ಕೆ /ಅಕ್ರಮಕ್ಕೆ ಇವರು ಪರೋಕ್ಷವಾಗಿ ಸಹಕಾರವನ್ನು ನೀಡುತ್ತಿರುವುದು ಈ ಪ್ರಕರಣದಿಂದ ಕಂಡುಬಂದಿರುತ್ತದೆ .

ಸದರಿ ಕಚೇರಿಯಲ್ಲಿ ನಡೆಯುತ್ತಿರುವ ಅಕ್ರಮಕ್ಕೆ ಪೂರಕವೆಂಬಂತೆ ಈ ದೂರಿನ ಕೂಡ ಉಪನಿರ್ದೇಶಕರು -1 ವಿಭಾಗಿಯ ಸಹ ನಿರ್ದೇಶಕರ ಕಚೇರಿ , ಮೈಸೂರು ವಿಭಾಗ , ಮೈಸೂರು , ಇವರ ಪತ್ರ ಸಂಖ್ಯೆ :ಡಿಜೆಡಿ/ಜಸ್ವಕೋ/ಮೈಸೂರು /06/2021-22 ದಿನಾಂಕ : 01/01/2022 ಇದರಲ್ಲಿ ಶ್ರೀ ಸೈಯದ್ ಮುಜೀಬ್, ದ್ವಿತೀಯ ದರ್ಜೆ ಸಹಾಯಕರು, ಇವರು ವೈದ್ಯಕೀಯ ವೆಚ್ಚವನ್ನು ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ, ಹಾಗೂ ಶ್ರೀ ಕೆ.ವಿಜಯ್ ಕುಮಾರ್, ವಿಷಯನಿರ್ವಾಹಕರು/ಪ್ರಥಮ ದರ್ಜೆ ಸಹಾಯಕರು ಇವರಿಗೆ 10% ಕಮಿಷನ್ ನೀಡಿ ಮೆಡಿಕಲ್ ಬಿಲ್ಲುಗಳನ್ನು ಮಂಜೂರು ಮಾಡಿರುವ ಬಗ್ಗೆ ಉಲ್ಲೇಖಿಸಿಕೊಂಡಿದ್ದು ಈ ರೀತಿಯಾದ ವಿವರಣೆ ಇರುವ ಸದರಿ ಪತ್ರವನ್ನು ಈ ದೂರಿನ ಲಗತ್ತು -[illegible]ರಲ್ಲಿ ಲಗತ್ತಿರುತ್ತೇನೆ . ಈ ಎಲ್ಲದರಿಂದ ಕಂಡುಬರುವ ಅಂಶವೇನೆಂದರೆ , ಮೈಸೂರಿನ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಮತ್ತು ಇದರ ಅಧೀನ ಕಚೇರಿಗಳಲ್ಲಿ, ಇದೇ ರೀತಿ 2010 ರಿಂದ 2022 ರವರೆಗೆ ಮೆಡಿಕಲ್ ಬಿಲ್ಲುಗಳ ಮರುಪಾವತಿಯಲ್ಲಿ ನಕಲಿ ಬಿಲ್/ ಹೆಚ್ಚುವರಿ ಬಿಲ್/ ಮಾನ್ಯವಲ್ಲದ ಆಸ್ಪತ್ರೆಗಳಿಂದ ಚಿಕಿತ್ಸೆ ಪಡೆದ ಬಿಲ್/ ಮರುಪಾವತಿ ಮಾಡಿ ಅಧಿಕಾರ ದುರ್ಬಳಕೆ ಮಾಡಿಕೊಂಡು, ಕರ್ತವ್ಯ ಲೋಪವೆಸಗಿ, **ಅಧಿಕಾರಿಗಳು 10% ಕಮಿಷನ್ ಲಂಚ** ಪಡೆದು ಭ್ರಷ್ಟಾಚಾರ ನಡೆಸಿದ್ದು, ಈ ಬಗ್ಗೆ ಈ ಮೇಲೆ ದೂರಿನಲ್ಲಿ ಹೇಳಿದಂತೆ, ಮಾಹಿತಿ ಕೋರಲಾಗಿ ಮಾಹಿತಿಯನ್ನು ನೀಡದೆ , ನಿರಾಕರಿಸಿ ತಮ್ಮ ಅಧೀನ ಕಚೇರಿಗಳಲ್ಲಿ ಭ್ರಷ್ಟಾಚಾರ ನಡೆಯಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಸಹಕಾರ ಇರುವುದು ಈ ಪ್ರಕರಣದಲ್ಲಿ ಕಂಡು ಬಂದಿದ್ದು, ಮತ್ತು ಈ ಎಲ್ಲಾ ರೀತಿಯ ಭ್ರಷ್ಟಾಚಾರದಲ್ಲಿ ಇವರುಗಳು ಸಹ ನೇರವಾಗಿ ಶಾಮಿಲಾಗಿರುವುದರಿಂದ, 2010 ರಿಂದ 2022 ರವರೆಗಿನ ಮೈಸೂರಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯ, ಮತ್ತು ಇದರ ಅಧೀನ ಕಚೇರಿಯ ಎಲ್ಲಾ ಅಧಿಕಾರಿಗಳ (ಎ.ಬಿ.ಸಿ.ಡಿ ವೃಂದ) , ಮೆಡಿಕಲ್ ಬಿಲ್ಲುಗಳ ಮರುಪಾವತಿ ಕಡತವನ್ನು ತನಿಖೆಗೆ ಒಳಪಡಿಸಿ, ಕ್ರಿಮಿನಲ್ ಮಕದ್ದಮ್ಮೆ ದಾಖಲಿಸಿ, ಪ್ರಕರಣದ ವಿಚಾರಣೆ ಮಾಡಿ, ಇವರುಗಳನ್ನು ಸೇವೆಯಿಂದ ವಜಾಗೊಳಿಸಿ, ದುರ್ಬಳಕೆಯಾಗಿರುವ ಸರ್ಕಾರಿ ಹಣವನ್ನು ಸದರಿ ಅಧಿಕಾರಿಗಳಿಂದ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮವಹಿಸಬೇಕೆಂದು ಈ ಮೂಲಕ ವಿನಮ್ರವಾಗಿ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ .

ವಂದನೆಗಳೊಂದಿಗೆ .

ತಮ್ಮ ವಿಶ್ವಾಸಿ

(ರವೀಂದ್ರ.ಎಂ)

ಸ್ಥಳ : ಮೈಸೂರು

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಮೈಸೂರು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ನಜರ್‌ಬಾದ್, ಮೈಸೂರು
ದೂರವಾಣಿ:0821–2529205 ಫ್ಯಾಕ್ಸ್:0821–2435575 ಇ–ಮೇಲ್: dhomysore@gmail.com

ಸಂಖ್ಯೆ: ಮಾ.ಹ/68/2022–23

ದಿನಾಂಕ: 21.12.2022

:: ಹಿಂಬರಹ ::

ವಿಷಯ: 2005 ರ ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಿರುವ ಮೇಲ್ಮನವಿಗೆ ಹಿಂಬರಹ ನೀಡಿ ಪತ್ರ ಹಿಂದಿರುಗಿಸುತ್ತಿರುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ನೋಂದಾಯಿತ ಅಂಚೆಯ ಸ್ವೀಕೃತಿ ದಿನಾಂಕ: 12.09.2022.

******

ಮೇಲಿನ ವಿಷಯ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2005 ರ ಮಾಹಿತಿ ಹಕ್ಕು ಅಧಿನಿಯಮದಡಿ ನೀವು ಸಲ್ಲಿಸಿದ್ದ ಅರ್ಜಿಗೆ ನೀಡಲಾದ ಹಿಂಬರಹವನ್ನು ಪ್ರಶ್ನಿಸಿ ಪ್ರಥಮ ಮೇಲ್ಮನವಿ ಸಲ್ಲಿಸಿರುತ್ತೀರಿ, ನಿಮ್ಮ ಅರ್ಜಿಯನ್ನು ಪರಿಶೀಲಿಸಿದಾಗ 2010 ರಿಂದ 2022 ರವರೆಗಿನ ಅಧಿಕಾರಿ / ನೌಕರರ ವೈದ್ಯಕೀಯ ಮರು ಪಾವತಿಯ ಬಿಲ್ಲು ಬಾಬ್ತುಗಳ ದಾಖಲಾತಿಗಳು ಮೂರನೇ ವ್ಯಕ್ತಿಯ ದಾಖಲಾತಿಗಳಾಗಿರುವುದರಿಂದ ಹಾಗೂ ವೈಯಕ್ತಿಕ ಮಾಹಿತಿ ಆಗಿರುವುದರಿಂದ ಅವುಗಳನ್ನು ನಿಯಮಾನುಸಾರ ನೀಡಲಾಗುವುದಿಲ್ಲವೆಂದು ಸ್ಪಷ್ಟವಾಗಿ ತಮಗೆ ತಿಳಿಸುತ್ತಾ ನಿಮ್ಮ ಮೇಲ್ಮನವಿಯ ಅರ್ಜಿಯನ್ನು ಹಿಂದಿರುಗಿಸಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು

ಗೆ,
ಶೀ ರವೀಂದ್ರ
# 278 ಸರ್ಕಾರಿ ಉತ್ತನಹಳ್ಳಿ
ಹಡಜನ ಅಂಚೆ
ವರುಣಾ ಹೋಬಳಿ,
ಮೈಸೂರು ತಾಲ್ಲೂಕು.

ಕರ್ನಾಟಕ ಸರ್ಕಾರ

**ವಿಭಾಗೀಯ ಸಹ ನಿರ್ದೇಶಕರ ಕಛೇರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,**
**ಮೈಸೂರು ವಿಭಾಗ, (ಇ ಡಿ ಆಸ್ಪತ್ರೆ) ಕೆ.ಆರ್.ಎಸ್ ಮುಖ್ಯ ರಸ್ತೆ, ಮೇಟಗಳ್ಳಿ ಮೈಸೂರು–570016.**

**Mail.id : djdmysurudiv-hfws@karnataka.gov.in** ದೂ.ಸಂಖ್ಯೆ:0821–2449205

ಸಂಖ್ಯೆ:ಡಿಜೆಡಿ/ಜಸ್ವಕೋ/ಮೈಸೂರು/06/2021–2022 ದಿನಾಂಕ:01.01.2022.

ಗೆ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು.

ವಿಷಯ : ಶ್ರೀ ಸಯ್ಯದ್ ಮುಜೀಬ್, ದ್ವಿ.ದ.ಸ ರವರು ವೈದ್ಯಕೀಯ ವೆಚ್ಚವನ್ನು ದುರ್ಬಳಕೆ ಮಾಡಿಕೊಂಡಿರುವುದಾಗಿ ನೀಡಿರುವ ದೂರಿನ ಬಗ್ಗೆ.

ಉಲ್ಲೇಖ :
1. ಮುಖ್ಯ ಆಡಳಿತಾಧಿಕಾರಿಗಳು, ಆರೋಗ್ಯ ಮತ್ತು ಕು.ಕ.ಸೇವೆಗಳು, ಬೆಂಗಳೂರು ರವರ ಪತ್ರ ಸಂಖ್ಯೆ: ಜಸ್ವಕೋ/ಮೈವಿ/61/2021–22 ದಿನಾಂಕ:03.09.2021, 08.11.2021.
2. ಉಪ ನಿಂಬಂಧಕರು, (ವಿಚಾರಣೆಗಳು–04) ಕರ್ನಾಟಕ ಲೋಕಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಎಂವೈಎಸ್/2959/2021/ಡಿಆರ್‌ಇ–4 ದಿ:27.12.2021.
3. ಇದೇ ಪತ್ರ ಸಮ ಸಂಖ್ಯೆ ದಿನಾಂಕ:23.12.2021.

******

ಶ್ರೀ ಸಯ್ಯದ್ ಮುಜೀಬ್, ದ್ವಿ.ದ.ಸ, ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಛೇರಿ, ಮೈಸೂರು ರವರು ಈ ಹಿಂದೆ ಜಿಲ್ಲಾ ಕ್ಷಯರೋಗ ನಿವಾರಣಾ ಕೇಂದ್ರ, ಮೈಸೂರು ಇಲ್ಲಿ ವಾಹನ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿಯವರು ಪೊಟ್ಟಿ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲುಗಳನ್ನು ಸೃಷ್ಟಿಸಿ ನಿಮ್ಮ ಕಛೇರಿಯ ವಿಷಯ ನಿರ್ವಾಹಕರಾದ ಶ್ರೀ ಕೆ.ವಿಜಯ್ ಕುಮಾರ್, ಪ್ರ.ದ.ಸ ರವರಿಗೆ 10% ಕಮೀಷನ್ ನೀಡಿ ಬಿಲ್ಲುಗಳನ್ನು ಮಂಜೂರು ಮಾಡಿಸಿಕೊಳ್ಳುವ ಮೂಲಕ ಸರ್ಕಾರಕ್ಕೆ ದ್ರೋಹಬಗೆದಿರುತ್ತಾರೆ ಎಂಬುದಾಗಿ ಸಿ.ಪಿ.ಯೋಗಾಶಂಕರ್, ಮೈಸೂರು ಎಂಬುವವರು ದೂರು ನೀಡಿರುವುದಾಗಿ ಉಲ್ಲೇಖ (1)ಮತ್ತು(2)ರ ಪತ್ರದಲ್ಲಿ ತಿಳಿಸುತ್ತಾ, ಈ ಬಗ್ಗೆ ನಿಯಮಾನುಸಾರ ತನಿಖೆ ಕೈಗೊಂಡು ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಿರುತ್ತಾರೆ. ಪ್ರಾಥಮಿಕ ತನಿಖೆ ನಡೆಸಲು ದಿನಾಂಕ:24.12.2021 ನ್ನು ನಿಗದಿಪಡಿಸಲಾಗಿತ್ತು ಸದರಿ ದಿನಾಂಕದಂದು ಕಾರಣಾಂತರದಿಂದ ತನಿಖೆ ನಡೆಸಲು ಸಾಧ್ಯವಾಗುತ್ತಿರುವುದಿಲ್ಲ. ಈ ಬಗ್ಗೆ ಉಲ್ಲೇಖ (3)ರ ಪತ್ರದಲ್ಲಿ ಮುಂದಿನ ದಿನಾಂಕವನ್ನು ತಿಳಿಸುವುದಾಗಿ ತಿಳಿಸಲಾಗಿತ್ತು.

ಪ್ರಕರಣದ ಪ್ರಾಥಮಿಕ ತನಿಖೆಯನ್ನು ಅತಿ ಜರೂರಾಗಿ ನಡೆಸಬೇಕಾಗಿರುವುದರಿಂದ ದಿನಾಂಕ:06.01.2022 ರಂದು ಬೆಳಿಗ್ಗೆ 11.00 ಗಂಟೆಗೆ ತಮ್ಮ ಕಛೇರಿಯಲ್ಲಿ ನಡೆಸಲು ನಿಗದಿಪಡಿಸಲಾಗಿರುತ್ತದೆ, ಆ ಸಮಯದಲ್ಲಿ ಸಂಬಂಧಪಟ್ಟ ನೌಕರರು ಹಾಜರಿದ್ದು ತಮ್ಮಗಳ ಹೇಳಿಕೆ/ದಾಖಲೆಗಳನ್ನು ತನಿಖಾಧಿಕಾರಿಗಳಿಗೆ ಸಲ್ಲಿಸುವಂತೆ ತಮ್ಮ ಮೂಲಕ ಆದೇಶಿಸುವಂತೆ ಈ ಮೂಲಕ ಸೂಚಿಸಿದೆ.

ಉಪ ನಿರ್ದೇಶಕರು–1,
ವಿಭಾಗೀಯ ಸಹ ನಿರ್ದೇಶಕರ ಕಛೇರಿ,
ಮೈಸೂರು ವಿಭಾಗ, ಮೈಸೂರು.

ಪ್ರತಿಗಳನ್ನು ಮಾಹಿತಿಗಾಗಿ :
1. ಉಪ ನಿಂಬಂಧಕರು, (ವಿಚಾರಣೆಗಳು–04) ಕರ್ನಾಟಕ ಲೋಕಯುಕ್ತ, ಡಾ॥ ಬಿ.ಆರ್.ಅಂಬೇಡ್ಕರ್ ಬೀದಿ ಬೆಂಗಳೂರು–01.
2. ಮುಖ್ಯ ಆಡಳಿತಾಧಿಕಾರಿಗಳು, ಆರೋಗ್ಯ ಮತ್ತು ಕು.ಕ.ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು–560023.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಮೈಸೂರು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ನಜರ್‌ಬಾದ್, ಮೈಸೂರು
ದೂರವಾಣಿ:0821-2529205 ಫ್ಯಾಕ್ಸ್:0821-2435575 ಇ-ಮೇಲ್: dhomysore@gmail.com

ಸಂಖ್ಯೆ: ಮಾ.ಹ/ 71/2022-23

ದಿನಾಂಕ: 21.12.2022

:: ಹಿಂಬರಹ ::

ವಿಷಯ: 2005 ರ ಮಾಹಿತಿ ಹಕ್ಕು ಕಾಯ್ದೆಯಡಿ ಹಿಂಬರಹ ನೀಡುತ್ತಿರುವ ಬಗ್ಗೆ.
ಉಲ್ಲೇಖ: ಈ ಕಛೇರಿಯ ನೋಂದಾಯಿತ ಅಂಚೆಯ ಸ್ವೀಕೃತಿ ದಿನಾಂಕ: 12.09.2022

******

ಮೇಲಿನ ವಿಷಯ, ಉಲ್ಲೇಖಕ್ಕೆ ಸಂಬಂಧಿಸಿದಂತೆ, 2005 ರ ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ನೀವು ಅರ್ಜಿ ಸಲ್ಲಿಸಿ ಶ್ರೀ ವಿಜಯ್ ಕುಮಾರ್.ಕೆ, ಪ್ರಥಮ ದರ್ಜೆ ಸಹಾಯಕರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮೈಸೂರು ಇವರು ಡಾ॥ ವೆಂಕಟೇಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಸಹಿ ನಕಲು ಹಾಗಿರುತ್ತದೆ ಎಂದು ಈ ಬಗ್ಗೆ ದಾಕಲಾತಿ ಧೃಡೀಕೃತ ಪ್ರತಿಯನ್ನು ಕೋರಿರುತ್ತೀರಿ, ಈ ಬಗ್ಗೆ ವಿಭಾಗೀಯ ಸಹ ನಿರ್ದೇಶಕರ ಕಛೇರಿಯಲ್ಲಿ ತನಿಖೆ ಪ್ರಗತಿಯಲ್ಲಿದ್ದು ಮಾಹಿತಿ ನೀಡಲು ಸಾಧ್ಯವಿಲ್ಲವೆಂಬ ಬಗ್ಗೆ ಈ ಹಿಂಬರಹದಲ್ಲಿ ತಮಗೆ ತಿಳಿಸಲಾಗುತ್ತಿದೆ.

ಮಾಹಿತಿ ಅಧಿಕಾರಿ ಹಾಗೂ ಸಹಾಯಕ ಆಡಳಿತಾಧಿಕಾರಿ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ,
ಮೈಸೂರು ಜಿಲ್ಲೆ, ಮೈಸೂರು.

ಗೆ,

ಶ್ರೀ ರವೀಂದ್ರ
# 278 ಸರ್ಕಾರಿ ಉತ್ತನಹಳ್ಳಿ
ಹಡಜನ ಅಂಚೆ
ವರುಣಾ ಹೋಬಳಿ,
ಮೈಸೂರು ತಾಲ್ಲೂಕು.

<Dial 18002666868> <Wear Masks, Stay Safe>

RK777554668IN IVR:8275777554668
RL MYSURU H.O <570001>
Counter No:2,19/01/2023,12:37
To:HONBLE LOKAYUKT HA ,BG
PIN:560001, Bengaluru G.P.O.
From:R AVINDRA M ,278
Wt:45gms
Amt:35.00(Cash)
<Track on www.indiapost.gov.in>
<Dial 18002666868> <Wear Masks, Stay Safe>

RK777554671IN IVR:8275777554671
RL MYSURU H.O <570001>
Counter No:2,19/01/2023,12:37
To:VANDITHA SHAR MA ,BG
PIN:560001, Bengaluru G.P.O.
From:R AVINDRA M ,278
Wt:45gms
Amt:35.00(Cash)
<Track on www.indiapost.gov.in>
<Dial 18002666868> <Wear Masks, Stay Safe>

RK777554552IN IVR:8275777554552
RL MYSURU H.O <570001>
Counter No:2,19/01/2023,12:37
To:GOV ADL SECRET ARY ,BG
PIN:560001, Bengaluru G.P.O.
From:R AVINDRA M ,278
Wt:40gms
Amt:35.00(Cash)